(ಆ) ಸದ್ಯದಲ್ಲಿ ೧೯೩ ಮುಸ್ಲಿಂ ಅಂಗನವಾಡಿ ಕಾರ್ಯಕರ್ತೆಯರು ಕೆಲಸ ನಿರ್ವಹಿಸುತ್ತಿದ್ದಾರೆ.

(ಇ) ಕೇಂದ್ರ ಸರ್ಕಾರದ ಸೂಚನೆಯಂತೆ, ಹಿಂದುಳಿದ ಮತ್ತು ಬರಗಾಲ ಪೀಡಿತ ಪ್ರದೇಶ ಹಾಗೂ ವಿಶೇಷ ಕ್ಷೇತ್ರಗಳಿಗೆ ಅದ್ಯತೆಯ ಮೇಲೆ ಐ ಸಿ ಡಿ ಎಸ್ ಯೋಜನೆಯನ್ನು ಮಂಜೂರು ಮಾಡಬೇಕಾಗಿದೆ.

(ಈ) ಯಾವುದೇ ಜಾತಿ, ಧರ್ಮ, ಸಮುದಾಯ ಹಾಗೂ ಭಾಷೆಯನ್ನಾಡುವ ಜನಾಂಗಕ್ಕಾಗಿ ಪ್ರತ್ಯೇಕವಾಗಿ ಅಂಗನವಾಡಿಗಳು ಮಂಜೂರು ಮಾಡುವಂತೆ ಇಲ್ಲವಾದ್ದರಿಂದ ಉರ್ದು ಮಾತನಾಡುವ ಜನತೆಗೆ ಪ್ರತ್ಯೇಕವಾದ ಅಂಗನವಾಡಿ ಸೌಲಭ್ಯಗಳನ್ನು ಕಲ್ಪಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್.—ಅಧ್ಯಕ್ಷರೇ, ೨ ವರ್ಷಗಳಿಂದ ಯಾವ ಬಾಲವಾಡಿಗಳೂ ಏತಕ್ಕೆ ಸ್ಯಾಂಕ್ಷನ್ ಆಗಿಲ್ಲ ? ಬಾಲವಾಡಿ ಹಾಗೂ ಅಂಗನವಾಡಿಗಳನ್ನು ಯಾವ ಭಾಷೆಯಲ್ಲಿ ರನ್ ಮಾಡುತ್ತಿದ್ದೀರಿ ?

ಶ್ರೀ ವಿ. ಎಲ್. ಪಾಟೀಲ್.—ಕನ್ನಡದಲ್ಲಿ

SRI R. ROSHAN BEIG.—To my question (4) it is said

'Since no anganwadies are sanctioned for any particular religion, caste, community or language, the qnestion of establishing anganwadies to provide facilities exclusively for urdu speaking people does not arise.'

But according to constitutional provisions a child has to be taught in his own mother-tongue, whether it is Tamil, Telugu, or Urdu. What steps the Government intend to do in this regard?

ಶ್ರೀ ವಿ. ಎಲ್. ಪಾಟೀಲ್.—ಎಲ್ಲಾ ಅಂಗನವಾಡಿಗಳನ್ನು ಸೆಂಟ್ರಲ್‌ನಿಂದ ಪರ್ಮಿಷನ್ ತೆಗೆದು ಕೊಂಡು ಪ್ರಾರಂಭ ಮಾಡುತ್ತೇನೆ.

SRI R. ROSHAN BEIG.—No doubt you are getting permission from the Central Government but it is your duty to protect the interest of linguistic minorities. You cannot just say it is a Center's directive.

ಶ್ರೀ ವಿ. ಎಲ್. ಪಾಟೀಲ್.—ಪ್ರತ್ಯೇಕವಾಗಿ ಜಾತಿ, ಭಾಷೆ ಮೇಲೆ ಇಲ್ಲಿಯವರೆಗೆ ಅಂಗನವಾಡಿಗಳನ್ನು ಶುರು ಮಾಡಿಲ್ಲ ಮಾನ್ಯ ಸದಸ್ಯರು ಸೂಚನೆ ಮಾಡಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಸರ್ಕಾರದ ಮಂತ್ರಿಗಳ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ

೧೬೦೮ ಶ್ರೀ ಕೆ ಪಿ. ಮಾಗೆಣ್ಣವರ್ (ಸದಲಗಾ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯ ಸರ್ಕಾರದ ಮಂತ್ರಿಗಳ ಕಛೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

(ಆ) ಆ ಸಿಬ್ಬಂದಿಗಳನ್ನು ಸರ್ಕಾರಿ ನೌಕರರೆಂದು ಖಾಯಂ ಆಗಿ ಪರಿಗಣಿಸುವ ವಿಚಾರವು ಸರ್ಕಾರದವರ ಮುಂದಿದೆಯೇ?

(ಇ) ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಖಾಯಂ ಆಗಿ ಪರಿಗಣಿಸಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೫೩

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಕೆ. ಪಿ. ಮಾಗೆಣ್ಣವರ್.—ಅಧ್ಯಕ್ಷರೇ, ಸಿಬ್ಬಂದಿಗಳು ಕಳೆದ ೩ ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ರಾತ್ರಿ ಹಗಲೆನ್ನದೆ ಇವರು ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಇವರನ್ನು ಖಾಯಂ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇವರನ್ನು ಖಾಯಂ ಮಾಡುವುದಕ್ಕೆ ಬರುವುದಿಲ್ಲ. ಇವರನ್ನು ನೇಮಕ ಮಾಡಿಕೊಳ್ಳುವುದು, ಮಂತ್ರಿಗಳ ಮನೆಯೊಳಗೆ ಬೇರೆ ಕೆಲಸ ಮಾಡುವ ಬಗ್ಗೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಮಂತ್ರಿಗಳು ಎಲ್ಲಿಯವರೆಗೆ ಅಧಿಕಾರದಲ್ಲಿ ಇರುತ್ತಾರೋ ಅಲ್ಲಿಯವರೆಗೆ ನೇಮಕ ಮಾಡಿಕೊಂಡ ಜನರು ಇವರು, ಇವರನ್ನು ನೇಮಕ ಮಾಡುವಾಗ ಸರ್ಕಾರಿ ನೇಮಕಾತಿ ನಿಯಮಗಳನ್ನು ಅಬ್ಸರ್ವ್ ಮಾಡಿ ಮಾಡುವುದಿಲ್ಲ ಇವರಿಗೆ ರಿಸರ್ವೇಷನ್ ಅಥವಾ ರೋಸ್ಟರ್ ಪದ್ಧತಿ ಇರುವುದಿಲ್ಲ, ಮತ್ತು ಆ ಕೆಲಸಕ್ಕೆ ಬೇಕಾಗತಕ್ಕ ಅರ್ಹತೆ ಅವರಲ್ಲಿ ಇರುತ್ತದೋ ಇಲ್ಲವೋ ಗೊತ್ತಿರುವುದಿಲ್ಲ ಆದುದರಿಂದ ಇಂತಹ ಜನರನ್ನು ಖಾಯಂ ಆಗಿ ಸರ್ಕಾರಿ ಸೇವೆಯಲ್ಲಿ ಅಬ್ಸರ್ವ್ ಮಾಡುವುದಕ್ಕೆ ಸಾಧ್ಯವಿಲ್ಲ.

ವಿದ್ಯಾರ್ಥಿಗಳ ಮತ್ತು ದುಡಿಯುವ ಮಹಿಳೆಯರ ಹಾಸ್ಟೆಲ್ ಮತ್ತು ಮಕ್ಕಳ ತೊಟ್ಟಿಲು ಮನೆ

೧೯೫೩ ಶ್ರೀ ಪಂಪಾಪತಿ ಇವರ ಪರವಾಗಿ ಶ್ರೀ ಕೆ. ಬಿ. ಶಾಣಪ್ಪನವರು.— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ನಗರದಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳೆಷ್ಟು ?

ಆ) ದುಡಿಯುವ ಮಹಿಳೆಯರಿಗಾಗಿ ಪ್ರತ್ಯೇಕವಾದ ವಸತಿ ಗೃಹ ಪ್ರಾರಂಭಿಸುವ ಯೋಜನೆ ಇದೆಯೇ, ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ದಾವಣಗೆರೆ ನಗರದಲ್ಲಿ ೧೦ ವಿದ್ಯಾರ್ಥಿನಿಲಯಗಳಿವೆ ಇವುಗಳಲ್ಲಿ ೮ ಬಾಲಕ ಮತ್ತು ೨ ಬಾಲಕಿಯರಿಗಾಗಿ ನಡೆಯುತ್ತಿವೆ.

ಆ) ಹೌದು, ದುಡಿಯುವ ಮಹಿಳೆಯರಿಗಾಗಿ ಕೇಂದ್ರ ನಿಯೋಜಿತ ಯೋಜನೆಯೊಂದಿದೆ. ಇದನ್ನು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಲ್ಲಿ ವಸತಿ ಗೃಹ ಕಟ್ಟಲು ರಿಜಿಸ್ಟರ್ಡ್ ಆದ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ನೀಡುವುದು. ದಾವಣಗೆರೆ ನಗರದಲ್ಲಿ ದುಡಿಯುವ ಮಹಿಳೆಯರಿಗಾಗಿ ಒಂದು ವಸತಿ ಗೃಹ ಇದೆ. ಇದನ್ನು ವನಿತಾ ಸಮಾಜದವರು ೧೧,೦೦೦ ರೂ ಧನ (ಆಡ್‌ಹಾಕ್) ಸಹಾಯದಿಂದ ನಡೆಸುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ (ಮಾನ್ಯ ಪಂಪಾಪತಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ವನಿತಾ ಸಮಾಜದವರು ದುಡಿಯುವ ಮಹಿಳೆಯರಿಗೆ ಕಟ್ಟಡವನ್ನು ಕಟ್ಟುವ ಸಲುವಾಗಿ ೧೦ ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ನೀವೂ ಕೂಡ ಸರ್ಕಾರದ ವತಿಯಿಂದ ಧನಸಹಾಯ ನೀಡಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಲು ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಇದಕ್ಕೆ ಧನಸಹಾಯವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದವರು ಇಬ್ಬರೂ ಕೊಡಬೇಕಾಗುತ್ತದೆ. ಕೇಂದ್ರದವರು ೭½ ಪರ್ಸೆಂಟ್ ಕೊಟ್ಟರೆ, ರಾಜ್ಯ ಸರ್ಕಾರದಿಂದ ೧೨½ ಪರ್ಸೆಂಟ್ ಹಣವನ್ನು ಕೊಡಬೇಕಾಗುತ್ತದೆ. ಮೊದಲು ಕೇಂದ್ರ ಸರ್ಕಾರದವರು ಕೊಟ್ಟರೆ ಅನಂತರ ನಾವು ಕೊಡುತ್ತೇವೆ.